ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಹಳೆಯ ಬಾಕಿಗಳನ್ನು ವಸೂಲುಮಾಡುವುದಕ್ಕೆ ಏನು ತೊಂದರೆ ಇತ್ತು ?

ಶ್ರೀ ಕಡಿದಾಳ್ ಮಂಜಪ್ಪ.—ನುಮಾರು ಎರಡೂ ವರೆಲಕ್ಷ ರೂಪಾಯಿವರೆಗೆ ಹೈಕೋರ್ಟಿನಿಂದ ಸ್ಟೇ ಆರ್ಡರ್ ಕೊಟ್ಟಿದ್ದಾರೆ, ಕೆಲವು ಸಂದರ್ಭಗಳಲ್ಲಿ ಕೊಡುವುದಕ್ಕೆ ಚೈತನ್ಯವಿಲ್ಲದೆ ಹೀಗಾಗಿದೆ, ಮತ್ತೆ ಕೆಲವು ಸಂದರ್ಭಗಳಲ್ಲಿ ಕೊಡುವುದು ತಡವಾಗಿದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಇದರಲ್ಲಿ ರಾಜಕೀಯ ಮುಂದಾಳುಗಳಿಂದ ಬರಬೇಕಾದ ಬಾಕಿ ಇದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಬಿ. ರಾಚಯ್ಯ.—ಪೆಟ್ರೋಲ್‌ಬಂಕ್ ಇಟ್ಟಿರುವವರಿಂದ ಎಷ್ಟು ಬಾಕಿ ಬರಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—Classify ಮಾಡಿಲ್ಲ, ಒಟ್ಟು ಕೊಟ್ಟಿದೆ. ಇದರಲ್ಲಿ ಪೆಟ್ರೋಲ್‌ಬಂಕ್‌ನಿಂದ ಬರಬೇಕಾದುದು ಯಾವುದೆಂಬುದು ಗೊತ್ತಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಮೈಸೂರು ಜಿಲ್ಲೆಯಲ್ಲಿ ಪೆಟ್ರೋಲ್‌ಬಂಕಿನವರು ಎಷ್ಟು ಸೇಲ್ಸ್‌ಟ್ಯಾಕ್ಸ್ ಕೊಡಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವರು ಕೊಡಬೇಕಾಗಿತ್ತು, ಅದರಲ್ಲಿ ಸ್ವಲ್ಪ ವಸೂಲುಮಾಡಿದೆ.

ಶ್ರೀ ಬಿ. ರಾಚಯ್ಯ.—ಇದರಲ್ಲಿ ಹತ್ತುಸಾವಿರಕ್ಕಿಂತ ಜಾಸ್ತಿ ಬಾಕಿ ಇರುವುದೆಷ್ಟೆಂಬುದನ್ನು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಮೊದಲೇ ಕೇಳಿದ್ದರೆ ಹೇಳಬಹುದಾಗಿತ್ತು, ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ವಸೂಲುಮಾಡುವುದಕ್ಕೆ ಸರ್ಕಾರದವರು ಹೆದರಿಕೊಳ್ಳುತ್ತಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಯಾರದೂ ಹೆದರಿಕೆಯಿಲ್ಲ, ನಿರ್ದಾಕ್ಷಿಣ್ಯವಾಗಿ, ನಿರ್ಭಯವಾಗಿ ವಸೂಲು ಮಾಡುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಬರಬೇಕಾದ ಹಣದಲ್ಲಿ ಯಾವುದಾದರೂ ಸಂದರ್ಭದಲ್ಲಿ ರೆಮಿಷ್ಷನ್ ಕೊಟ್ಟಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೊಟ್ಟಿರುವಂತೆ ನೆನಪಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಬಾಕಿ ಕೊಡದಿದ್ದುದಕ್ಕಾಗಿ ಪ್ರಾಸಿಕ್ಯೂಷನ್ ಆಗಿರುವುದೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಆಗಿವೆ, ಇಷ್ಟೇ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಪ್ರಾಸಿಕ್ಯೂಟ್‌ಮಾಡಿ ವಾಪಸ್ ತೆಗೆದುಕೊಂಡದ್ದೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಹೇಳುವುದಕ್ಕಾಗುವುದಿಲ್ಲ; ಹಣ ಕೊಟ್ಟಿದ್ದರೆ ವಾಪಸ್ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಂಥವುಗಳ ಪಟ್ಟಿಯನ್ನು ನಭೆಯಮುಂದಿಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಆ ರೀತಿ ಮಾಡುವುದು ಚೆನ್ನಾಗಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—Write off ಮಾಡಿರುವುದೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಕಾಂಪೌಂಡ್ ಮಾಡಿದ್ದೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

Sri B. NARAYANASWAMY.—Under the rules, should not the assessees deposit the amount before they prefer an appeal or revision ?

Sri Kadidal MANJAPPA.—Yes. The admitted amount.

Sri B. NARAYANASWAMY.—So, am I to understand that the admitted amount has been deposited ?

Sri Kadidal MANJAPPA.—May be.

Sri B. NARAYANASWAMY.—So, this 26 lakhs is the amount that was not admitted. That is the Government case. Is it not ?

Sri Kadidal MANJAPPA.—I cannot tell you off hand.

Sri B. NARAYANASWAMY.—Am I to understand that your officers are lethargic in collecting the amount ?

Sri Kadidal MANJAPPA.—They are doing their best.

Report of Sales Tax Commission.

Q.—483. **Sri V. R. NAIDU** (Malleswaram).—

Will the Government be pleased to state :—

(*a*) whether the Report of the Sales Tax Commission has been received ;

(*b*) the policy of Government regarding single-point Sales Tax ;

(*c*) whether it has come to their notice that there is a downward trend in the business transactions of the mercantile class ;

(*d*) if so, whether they are contemplating to reduce taxes in the interest of merchant community ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) The object is to levy tax at one point at the first stage from wholesale dealers in respect of specified commodities so as to afford relief to a large number of retail dealers in the maintenance of accounts and in recovering tax from consumers at each stage of sale, while ensuring easy realisation of revenue by Government.

(SRI KADIDAL MANJAPPA.)

(*c*) Yes, in respect of certain commodities but not to any appreciable extent.

(*d*) This does not arise since tax is levied on the actual turnover.

ಶ್ರೀ ವಿ. ಆರ್. ನಾಯ್ಡು.—ಪ್ರಜಾಪ್ರಭುತ್ವ ಬಂದ ಮೇಲೆ ಸೇಲ್ಸ್ ಟ್ಯಾಕ್ಸ್ ಜಾರಿಗೆ ತಂದದ್ದೆ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಜಾಪ್ರಭುತ್ವ ಬರುವುದಕ್ಕಿಂತ ಮುಂಚೆಯೇ ಮಾನ್ಯ ಇಮಾಮ್ ಸಾಹೇಬರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಯಿತು. ಅವರ ಶಿಫಾರಸಿನಮೇಲೆ 1947ನೆಯ ಇಸವಿಯಲ್ಲಿ ಮಾಡಲಾಯಿತು.

ಶ್ರೀ ವಿ. ಆರ್. ನಾಯ್ಡು.—ಉಪ್ಪಿನಮೇಲೆ ತೆರಿಗೆ ಹಾಕಿದುದಕ್ಕಾಗಿ ಹಿಂದೆ ಮಹಾತ್ಮಾ ಗಾಂಧಿಯವರು ಸತ್ಯಾಗ್ರಹ ಮಾಡಿದುದು ಗೊತ್ತಿದೆಯೇ ?

Mr. SPEAKER.—How does it arise ? It does not arise.

ಶ್ರೀ ಎ. ಭೀಮಪ್ಪನಾಯಕ್.—ಈಗಲೂ ಉಪ್ಪಿನ ಮೇಲೆ ತೆರಿಗೆ ಹಾಕಿಲ್ಲ.

ಶ್ರೀ ವಿ. ಆರ್. ನಾಯ್ಡು.—ಸೇಲ್ಸ್ ಟ್ಯಾಕ್ಸ್ ಕಮಿಟಿ ವರದಿ ಬಂತೆ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆಯಲ್ಲಿ ಸೇಲ್ಸ್ ಟ್ಯಾಕ್ಸ್ ಕಮಿಷನ್ ಎಂದಿತ್ತು, ಅದಕ್ಕೆ ಉತ್ತರ ಕೊಟ್ಟಿದೆ. ಸಮಿತಿ ಎಂದು ತಮ್ಮ ಅಭಿಪ್ರಾಯವಾಗಿದ್ದರೆ, ಸರ್ಕಾರಕ್ಕೆ ಶಿಫಾರಸು ಕೊಟ್ಟಿದ್ದರು, ಅದರಂತೆ ಒಂದು ಮಸೂದೆ ತಯಾರಾಗಿ ಕಾನೂನಾಗಿದೆ. ಒಂದನೆಯ ತಾರೀಖಿನಿಂದ ಜಾರಿಗೆ ಬರುತ್ತದೆ.

ಶ್ರೀ ವಿ. ಆರ್. ನಾಯ್ಡು.— ಸೇಲ್ಸ್ ಟ್ಯಾಕ್ಸ್ ವಿಷಯದಲ್ಲಿ ಯಾವ ನೀತಿಯನ್ನನುಸರಿಸುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಮಾಡಿದ ವರದಿಯಲ್ಲಿದೆ.

ಶ್ರೀ ವಿ. ಆರ್. ನಾಯ್ಡು.—ಸರ್ಕಾರದವರು ನೇಮಕ ಮಾಡಿದ ಅಧಿಕಾರಿಗಳು ಸೇಲ್ಸ್ ಟ್ಯಾಕ್ಸ್ ವಸೂಲು ಮಾಡುವ ರೀತಿಯಲ್ಲಿ, ವರ್ತಕರು ಸತ್ಯವನ್ನು ಹೇಳಿದರೂ ಅವರನ್ನು ಅನತ್ಯದ ದಾರಿಗೆ ಎಳೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಸತ್ಯವಂತರನ್ನು ಅನತ್ಯದ ದಾರಿಗೆಳೆಯುವುದು ಕಷ್ಟ.

ಶ್ರೀ ವಿ. ಆರ್. ನಾಯ್ಡು.—ವರ್ತಕರು ಎಷ್ಟೇ ಸತ್ಯವಾಗಿ ಹೇಳಿದರೂ ಕೂಡ ಅದು ಸುಳ್ಳೆಂದು ಹೇಳಿ ಅಧಿಕಾರಿಗಳು ಅದನ್ನು ಒಪ್ಪದೇ ನಂಪ್ರದಾಯಕ್ಕೆ ವಿರುದ್ಧವಾಗಿ ನಡೆಯುತ್ತಿರುವುದು ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅಧಿಕಾರಿಗಳು ಕಾನೂನಿನ ನಿಯಮಗಳಂತೆ ನಡೆಯುತ್ತಾರೆ.

ಶ್ರೀ ವಿ. ಆರ್. ನಾಯ್ಡು.—ಈ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಎರಡು ಮಾತು ಹೇಳುತ್ತಾರೆಯೆ ? (ನಗು !)

(ಉತ್ತರವಿಲ್ಲ)

ಶ್ರೀ ಡಿ. ಆರ್. ಕರಿಗೌಡ.—ಆಂಧ್ರ ದೇಶದಿಂದ ಅಥವಾ ಇತರ ಪ್ರಾಂತ್ಯದಿಂದ ಏನಾದರೂ ಸಾಮಾ ನನ್ನು ತರಿಸಿದರೆ ಸೇಲ್ಸ್ ಟ್ಯಾಕ್ಸ್ ಯಾರಿಗೆ ಹೋಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಸುಪ್ರೀಂ ಕೋರ್ಟಿನ ತೀರ್ಮಾನವಿದೆ. ಈ ಸಂಬಂಧದಲ್ಲಿ, ಯಾವ ಸಂಸ್ಥಾನದಲ್ಲಿ consumptionಗಾಗಿ delivery ಆಗುತ್ತದೆಯೋ ಅಲ್ಲಿ ಕೊಡಬೇಕೆಂಬ ಭಾವನೆ ಇದೆ. ಇದು ಆಯಾ ಸಂದರ್ಭದ ಮೇಲೆ ಹೋಗುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಇದರಿಂದ ನಮ್ಮ ಸರ್ಕಾರಕ್ಕೆ ನಷ್ಟವಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಸೇಲ್ಸ್ ಟ್ಯಾಕ್ಸ್ ವಿಧಿಸುವುದಕ್ಕೆ ಯಾರಿಗೆ ಹಕ್ಕಿದೆಯೋ ಅವರಿಗೆ ಬರುತ್ತದೆ, ನಮಗೆ ಹಕ್ಕಿದ್ದರೆ ನಮಗೆ ಬರುತ್ತದೆ.

Depressed Class Representation in Police, Road Transport and Industries and Commerce Departments.

Q.—264. **Sri G. DUGGAPPA** (Holalkere—Scheduled Castes).—

Will the Government be pleased to state :—

(*a*) the number of persons entertained in the Police, Road Transport Department, and Department of Industries and Commerce, during the last year and the current year ;

(*b*) the cadre, pay of appointment, whether permanent, longstanding, temporary and the persons appointed in each cadre ;

(*c*) whether 16⅔ per cent reservation for depressed classes has been followed while making the appointments ;

(*d*) if so, the number of depressed class persons entertained during the period of 1953-54, 1954-55 ?

A.—**Sri Kadidal MANJAPPA** (Minister for Revenue and Public Works).—

	1953-54.	1954-55.
(*a*) The number of persons appointed in Police Department.	168	248
The number of persons appointed in R. T. Department.	74	88
The number of persons appointed in I. & C. Department.	21	41

(*b*) Please see statement appended below.

(*c*) Strict instructions have been issued to give effect to the reservation of 16⅔ per cent of direct recruitment appointments to the Scheduled Castes and Scheduled Tribes.

	1953-54.	1954-55.
(*d*) Police Department	19	32
Road Transport Department	3	4
Industries & Commerce Department	2	7